ಇ) ಜಾನಪದ ಲೋಕದಲ್ಲಿ ಹೆಜ್ಜೇಕಮ್ಮಟ ಪಿ.ಆರ್. ತಿಪ್ಪೇಸ್ವಾಮಿ, ಸ್ಮೃತಿ ಕಾರ್ಯಕ್ರಮ ಹಾವೇರಿಯಲ್ಲಿ ಬಯಲಾಟ ಉತ್ಸವ, ತಂಬೂರಿ ಮೇಳ, ನಕಲಿ ಜಾನಪದ ಕ್ಯಾಸೆಟ್: ಸಂವಾದ ಕಾರ್ಯಕ್ರಮ, ಡಾ:ಎಚ್.ಎಲ್.ನಾಗೇಗೌಡ ಗೌರವ ಸಮರ್ಪಣೆ, ಜನಪದ ಪರಿಕಲ್ಪನೆ ಮತ್ತು ಚಲನಚಿತ್ರ, ಜಾನಪದ ಗಾಯನ ಶೋಧ, ಬಾಗಲಕೋಟೆಯಲ್ಲಿ ಜಾನಪದ ಕಲಾಮೇಳ, ಗಾರುಡಿ, ಗೊಂಬೆ ಕಾರ್ಯಕ್ರಮ, ಕೋಲಾರದಲ್ಲಿ ಜಾನಪದ ಸಂಜೆ ಕಾರ್ಯಕ್ರಮಗಳು, ಹಾಗೂ ಜಾನಪದ ಪಾನೀಯಗಳು ಹಾಗೂ ಗೌರವ ಸಮರ್ಪಣೆ. ಡಾ:ದೇ.ಜವರೇಗೌಡ ಗೌರವ ಸಮರ್ಪಣೆ, ಮುದೇನೂರು ಸಂಗಣ್ಣ ಗೌರವ ಸಮರ್ಪಣೆ-ಜಾಗತೀಕರಣ ಮತ್ತು ಸಾಂಸ್ಕೃತಿಕ ಪಲ್ಲಟಗಳು - ಜಾನಪದ ಮತ್ತು ದೇಶೀಯತೆಯ ಅಂತರ್ ಸಂಬಂಧಗಳು ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ಈ) ಸಲ್ಲಿಸಿದೆ.

ಉ) ಇಲಾಖೆಯ ಆಯವ್ಯಯ ಮಿತಿಯಂತೆ ಅನುದಾನ ನೀಡಲಾಗುತ್ತಿದೆ.

ರಾಜ್ಯದಲ್ಲಿ ಅಂತ್ರಾಕ್ಸ್ ಪ್ರಕರಣಗಳನ್ನು ತಡೆಗಟ್ಟಲು ಮುಂಜಾಗ್ರತಾ ಕ್ರಮ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 257(136)

ಸದಸ್ಯರ ಹೆಸರು: ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು(ಶಿವಾಜಿನಗರ)

ಉತ್ತರಿಸುವ ಸದಸ್ಯರು: ಡಾ॥ಎ.ಬಿ.ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಪ್ರಶ್ನೆ

ಅ) ರಾಜ್ಯದಲ್ಲಿ ಎಲ್ಲೆಲ್ಲಿ ಅಂತ್ರಾಕ್ಸ್ ಪ್ರಕರಣ ಬೆಳಕಿಗೆ ಬಂದಿದೆ?

ಆ) ಇದಕ್ಕಾಗಿ ಮುಂಜಾಗ್ರತಾ ಕ್ರಮವನ್ನು ಸರ್ಕಾರ ಕೈಗೊಂಡಿದೆಯೇ?

ಇ) ಎಷ್ಟು ಮೊತ್ತದ ಔಷಧಿಗಳನ್ನು ಇದಕ್ಕಾಗಿ ಸಂಗ್ರಹಿಸಲಾಗಿದೆ?

ಈ) ಇಷ್ಟು ದೊಡ್ಡ ಪ್ರಮಾಣದಲ್ಲಿ ಔಷಧಿಗಳನ್ನು ಖರೀದಿಸುವ ಅಗತ್ಯತೆ ಇತ್ತೇ;

ಉ) ಯಾವ ಯಾವ ಕಂಪನಿಗಳಿಂದ ಈ ಔಷಧಿಗಳನ್ನು ಖರೀದಿಸಲಾಗಿದೆ?

ಊ) ಇವುಗಳಿಗೆ ಟೆಂಡರ್ ಕರೆಯಲಾಗಿದೆಯೇ?

ಋ) ಆಂತ್ರಾಕ್ಸ್ ಭೀತಿ ಕಡಿಮೆಯಾಗಿರುವುದರಿಂದ ಈ ಔಷಧಿಗಳು ಅನುಪಯುಕ್ತವಾಗುವುದಿಲ್ಲವೇ?

ಉತ್ತರ

ಅ) ರಾಜ್ಯದ ಕೋಲಾರ ಜಿಲ್ಲೆಯ ಶಿಡ್ಲಘಟ್ಟ ತಾಲ್ಲೂಕಿನ ಆಲ್‌ಕುರ್ಕ ಗ್ರಾಮದಲ್ಲಿ ದೃಢಪಟ್ಟಿರುವ ಒಂದೇ ಒಂದು ಆಂತ್ರಾಕ್ಸ್ ಪ್ರಕರಣ ಆಗಸ್ಟ್ 2001 ಬಳಕೆಗೆ ಬಂದಿದೆ.

ಆ) ಹೌದು.

ಇ) ಒಟ್ಟು ರೂ.71,72,500-00 ಮೊತ್ತ ಔಷಧಿಗಳನ್ನು ಸಂಗ್ರಹಿಸಲಾಗಿದೆ.

ಈ) ಅಗತ್ಯ ಇತ್ತು ದಿನಾಂಕ 23.10.2000 ರಂದು ನಡೆದ ತಜ್ಞರ ಸಭೆಯ ಅಭಿಪ್ರಾಯದ ಮೇರೆಗೆ ಅವರು ಸೂಚಿಸಿದ ಪ್ರಮಾಣದಲ್ಲಿ ಮುಂಜಾಗ್ರತೆ ಕ್ರಮವಾಗಿ ಈ ಔಷಧಿಗಳನ್ನು ಖರೀದಿಸಲಾಗಿದೆ.

ಉ) ಕರ್ನಾಟಕ ಆಂಟಿಬಯೋಟಿಕ್ಸ್ ಫಾರ್ಮಾಸಿಟಿಕಲ್ ಲಿ., (ಕೆ.ಎ.ಪಿ.ಎಲ್) ಇವರಿಂದ ಔಷಧಿಗಳನ್ನು ಖರೀದಿಸಲಾಗಿದೆ.

ಊ) ಇದು ಸರ್ಕಾರಿ ಸಾಮ್ಯದ ಸಂಸ್ಥೆಯಾಗಿದ್ದು ಮತ್ತು ಔಷಧಿಗಳ ಬೆಲೆಯನ್ನು ಸರ್ಕಾರಿ ಆದೇಶ ಸಂಖ್ಯೆ: ಆಕುಕ 118 ಹೆಚ್‌ಪಿಸಿ 97(ಪಿ) ದಿನಾಂಕ 24-8-1999ರಲ್ಲಿ ನಿಗಧಿಪಡಿಸಲಾಗಿದೆ. ಆದುದರಿಂದ ಟೆಂಡರು ಕರೆದಿರುವುದಿಲ್ಲ.

ಋ) ಆಂತ್ರಾಕ್ಸ್ ರೋಗದ ಚಿಕಿತ್ಸೆಗಾಗಿ ಉಪಯೋಗಿಸುವ ಸಾಮಾನ್ಯ ಔಷಧಿಗಳಾದ ಪೆನಿಸಿಲಿನ್ ಮತ್ತು ಡಾಕ್ಸಸೈಕ್ಲನ್ ಮುಂತಾದವುಗಳನ್ನು ಇತರೆ ಕಾಯಿಲೆಗಳ ಚಿಕಿತ್ಸೆಗೂ ಉಪಯೋಗಿಸಬಹುದಾಗಿದೆ.

ಡಿಪ್ಲೋಮಾ ಸಂಸ್ಥೆಗಳನ್ನು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಡಿಸುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 258(137)

ಸದಸ್ಯರ ಹೆಸರು: ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು (ಶಿವಾಜಿನಗರ)